ಸಾರ್ತ್ರ ಆಸ್ಪತ್ರೆಯಲ್ಲಿ ಇದ್ದಾಗ ಆದ ಒಂದು ಘಟನೆಯನ್ನು ಅವಳು ಹೀಗೆ ನಿರೂಪಿಸುತ್ತಾಳೆ: 'ಮುಂದಿನ ಸಲ ಡ್ರಿಂಕ್ಸ್ ಪಾರ್ಟಿ ನನ್ನ ಮನೆಯಲ್ಲಿ ಮಾಡೋಣ. ಆಗ ನನ್ನ ಕೈಯಲ್ಲಿ ನೀರಿರುವುದಿಲ್ಲ. ಬರೀ ವಿಸ್ಕಿ ಇರುವುದು' (ಪು. 91) ಎಂದು ಸಾರ್ತ್ರ ನಕ್ಕರಂತೆ. ಕೆಲ ಹೊತ್ತಿನ ಬಳಿಕ ನನ್ನೆಡೆಗೆ ನೋಡಿ 'ನನ್ನ ಶವ ಸಂಸ್ಕಾರ ಮಾಡಲು ಬೇಕಾಗುವಷ್ಟು ಹಣ ನಿನ್ನ ಬಳಿ ಇದೆಯೇ? ಎಂದರು. ನಾನು ಅಳತೊಡಗಿದೆ. ಸಾವಿನ ಹೊಸ್ತಿಲಲ್ಲಿ ನಿಂತಿರುವುದು ಅವರಿಗೂ ಗೊತ್ತಾಗಿತ್ತು. ಅವರ ಬೌದ್ಧಿಕ ಸಾಹಸಗಳು ಶರೀರದ ಅಸ್ವಸ್ಥತೆಯ ಎದುರು ಮಂಡಿಯೂರಿದ್ದವು. ಅಂದು ನನ್ನನ್ನು ಹತ್ತಿರ ಕರೆದು ಚುಂಬಿಸಿ ಕಿವಿಯಲ್ಲಿ ಉಸುರಿದರು: ನಿನ್ನನ್ನು ತುಂಬಾ ಪ್ರೀತಿಸುತ್ತೇನೆ.' (ಪು. 91) ಇಬ್ಬರು ಜಾಗತಿಕ ಮಟ್ಟದ ಚಿಂತಕ ಮತ್ತು ಚಿಂತಕಿಯ ನಡುವಣ ಸಂಬಂಧದ ಆಪ್ತತೆ ಗಾಢವಾಗಿ ಕಾಡತೊಡಗುತ್ತದೆ. ಅದೆಲ್ಲವೂ ಆದ ಮೇಲೆ ಆಕೆ ಹೇಳುತ್ತಾಳೆ, 'ನನಗೆ ಈಗ ಯಾವ ಸಾವಿನ ಭಯವೂ ಇಲ್ಲ' (ಪು. 94). ಅದು ಅವಳ ಆಗಿನ ಮನಃಸ್ಥಿತಿಯನ್ನು ಸೂಚಿಸುತ್ತಿದೆ. ಯಾಕೆಂದರೆ, ಯಾವುದನ್ನು ಕಳೆದುಕೊಳ್ಳಬಾರದೆಂದು ನಿರ್ಧರಿಸಿದ್ದಳೊ ಅದು ಅವಳಿಂದ ಈಗ ಕಳೆದುಹೋಗಿದೆ.

ಅವರ ನಡುವಿನ ವೈಯಕ್ತಿಕ ಸಂಬಂಧದ ಮಾರ್ದವತೆಯನ್ನು ಇಲ್ಲಿನ ಕೆಲ ಬರಹಗಳಲ್ಲಿ ನೋಡಬಹುದು. ಇತರ ಬರಹಗಳು ಸಾಹಿತ್ಯ ಮತ್ತು ಸಂಸ್ಕೃತಿಗೆ ಸಂಬಂಧ ಪಟ್ಟಿವೆ. 'ನಾನೊಬ್ಬ ಸ್ತ್ರೀವಾದಿ', 'ನಾವು ವಿಮರ್ಶೆಗೆ ಅತೀತರಲ್ಲ', 'ಹೆಣ್ಣಾದರಷ್ಟೇ ಸಾಲದು,' 'ಸಾಹಿತ್ಯ ಏನು ಮಾಡಬಹುದು?' 'ಕಾದಂಬರಿ ಮತ್ತು ರಂಗಭೂಮಿ' – ಇವು ಸಾಹಿತ್ಯ ವಿದ್ಯಾರ್ಥಿಗಳ ಅಧ್ಯಯನಕ್ಕೆ ಅತ್ಯಂತ ಮಹತ್ವದ ಕೊಡುಗೆಗಳಾಗಿವೆ. ಇದನ್ನು ಕೆಲವರು ಮಾತ್ರವೇ ಓದಬೇಕಾಗಿಲ್ಲ. ಎಲ್ಲರೂ ಓದಬೇಕಾದ ಲೇಖನಗಳಿವು. ಇದು ಸೃಜನಶೀಲವಾದ ಅನುವಾದ ಎಂದು ವಿಕ್ರಂ ವಿಸಾಜಿ ಹೇಳಿದ್ದಾರೆ. ಓದುವಾಗ ನಮಗೆ ಈ ಅನುಭವ ಉಂಟಾಗುತ್ತದೆ. ಬೋವಾ ಅವರ ಬದುಕು–ಚಿಂತನೆಯ ಜೊತೆಗೆ ನಾವು ಪ್ರಯಾಣ ಮಾಡಿದ ಅನುಭವವನ್ನು ಈ ಕೃತಿ ಕೊಡುತ್ತದೆ. ಇದರಲ್ಲಿ ಇರುವ ಒಟ್ಟು ಇಪ್ಪತ್ತು ಲೇಖನಗಳು ವೈವಿಧ್ಯಮಯವಾಗಿವೆ.

ಆಕೆ ಮಾರ್ಕ್ಸ್‌ವಾದವನ್ನು ಇಷ್ಟಪಟ್ಟರೂ ಅದರ ಮಿತಿಗಳನ್ನು ಹೇಳಲು ಹಿಂಜರಿಯುವುದಿಲ್ಲ. ವಾಸ್ತವ ಎನ್ನುವುದು ಲೇಖಕರ ಗ್ರಹಿಕೆಯ ಮಿತಿಗೆ ಸಂಬಂಧಿಸಿದ್ದೇ ಹೊರತು ಅದು ಹೊರಜಗತ್ತಿನ ವಾಸ್ತವವಲ್ಲ ಎಂಬುದು ಅವಳ ವಾದ. ಬರಹ ಎನ್ನುವುದು ಕಾಲದ ವಿರುದ್ಧ, ಮೃತ್ಯುವಿನ ವಿರುದ್ಧ ನಿರಂತರ ಸಂಘರ್ಷ ಹೂಡುವ ಕ್ರಿಯೆ. ಸಾಹಿತ್ಯ ಎನ್ನುವುದು ವ್ಯಕ್ತಿಯ ಮತ್ತು ಕಾಲದ ಅನಾವರಣವೇ ಹೊರತು ವಿರಾಮಕಾಲದ ಚಟುವಟಿಕೆ ಅಲ್ಲ. ನಾನು ಯಾರು? ನಾನು ಯಾಕೆ ಹೀಗೆ ಇದ್ದೇನೆ? ನನಗೆ ಇರುವ ಅರ್ಥವು ಯಾವುದು? ಎನ್ನುವುದನ್ನು ಸಿಮೋನ್ ಹುಡುಕಿದ್ದಾಳೆ. ಹಾಗೆಂದು ಯಾವುದೇ ತೀರ್ಮಾನವನ್ನು ಅವಳು ಕೊಡುವುದಿಲ್ಲ.

ವಿಕ್ರಮ ವಿಸಾಜಿ ಅವರು ಬೋವಾ ವ್ಯಕ್ತಿತ್ವ, ಬದುಕಿನ ಕುರಿತ ಬರಹಗಳನ್ನು ಅನುವಾದಿಸುವ ಮೂಲಕ ಮಹತ್ವದ ಕೆಲಸವನ್ನು ಮಾಡಿದ್ದಾರೆ. ಕನ್ನಡಕ್ಕೆ ಇದರ ಅಗತ್ಯವಿತ್ತು. ಈ ಕೃತಿಯಲ್ಲಿ ನಾವು ಬೋವಾಳನ್ನು ಅರಿತುಕೊಳ್ಳಲು ಹಲವು ದಾರಿಗಳಿವೆ. ಅದರ ಜೊತೆಗೆ ಸಾರ್ತ್ರನನ್ನು ಕೂಡ. ಒಟ್ಟಾರೆಯಾಗಿ ಹೆಣ್ಣು ಮತ್ತು ಅವಳ ಸೃಜನಶೀಲತೆಯ ಸಂಕಥನವು ಇದರಲ್ಲಿ ಸಿಗುತ್ತದೆ. ಹೆಣ್ಣು ಮತ್ತು ಅವಳ ಅಸ್ತಿತ್ವದ ಅರ್ಥವು ಇದರಲ್ಲಿ ಅಡಕವಾಗಿದೆ. ಇದನ್ನು ಓದುತ್ತಾ ನಾವು 'ಆಗುತ್ತೇವೆ'. ಅವಳೂ 'ಆಗಿದ್ದಾಳೆ'. ಸ್ವತಃ ಸಾರ್ತ್ರನೂ ಜೀವನದಲ್ಲಿ ಆಗುತ್ತಲೇ ಹೋದ. 'ಆಗುವಿಕೆ' ಎನ್ನುವುದೇ ಅತ್ಯಂತ ಮಹತ್ವದ ತತ್ವಜ್ಞಾನ. ಈ ಪುಸ್ತಕ ಕನ್ನಡದ ಚಿಂತನೆಯ ಎಲ್ಲೆಗಳನ್ನು ವಿಸ್ತರಿಸಲು ತನ್ನದೇ ಕೊಡುಗೆಯನ್ನು ನೀಡಬಲ್ಲದು.